ವೃತ್ತಿ

# ಇತರರನ್ನು ಸಬಲೀಕರಿಸುವುದು

ಪ್ರಶಾಂತ್ ಮಿಶ್ರಾ

ನಾವೆಲ್ಲರೂ ಪ್ರಾಮಾಣಿಕರಾಗಿರಬಹುದು, ಸಮಾಜ ಮತ್ತು ದೇಶಕ್ಕೆ ಸಂಬಂಧಿಸಿದಂತೆ ನಮ್ಮ ಹಕ್ಕು ಮತ್ತು ಜವಾಬ್ದಾರಿಗಳನ್ನು ಅರಿತಿದ್ದು, ಕಾನೂನು ನಿಯಮಗಳನ್ನು ಪಾಲಿಸುವ ನಾಗರಿಕರಾಗಿರಬಹುದು. ಆದರೆ ಒಳ್ಳೆಯ ನಾಗರಿಕರಾಗುವುದೆಂದರೆ, ನಮಗೆ ಸಾಧ್ಯವಿರುವ ರೀತಿಯಲ್ಲಿ ನಾವು ಸಮಾಜಕ್ಕೆ ಕೊಡುಗೆಯನ್ನು ನೀಡುವುದಾಗಿರುತ್ತದೆ. ನಾನು ಏನನ್ನು ಮಾಡಲು ನಿರ್ಧರಿಸಿದೆ ಎನ್ನುವುದು ಇಲ್ಲಿದೆ.

ನಾನು ಆರಂಭಿಸಿದ ಪ್ರಾಜೆಕ್ಟ್ ಕೇರೀಚ್‌ನ (Project Careach) ಮೂಲತತ್ತ್ವ ಯಾರಿಗೆ ಸಹಾಯದ ಅಗತ್ಯವಿದೆಯೋ ಅವರನ್ನು ಗುರುತಿಸಿ, ನೆರವು ನೀಡುವುದು ಮತ್ತು ಹಾಗೆ ನೀಡುವ ನೆರವು ಅವರಿಗೆ ಸಾಕಷ್ಟು ದೀರ್ಘಕಾಲದವರೆಗೆ–ಜೀವನ ಪರ್ಯಂತ–ವಾದರೂ – ಒಳ್ಳೆಯದೇ – ಉಪಯುಕ್ತವಾಗಿರುವ ಹಾಗೆ ನೋಡಿಕೊಳ್ಳುವುದು. ಭಾರತದಲ್ಲಿರುವ ಮಕ್ಕಳ ಸಂಖ್ಯೆಯು ಪ್ರಪಂಚದಲ್ಲಿಯೇ ಅತಿ ಹೆಚ್ಚಿನದು. ಅದರಲ್ಲಿ ಶೇ.95ರಷ್ಟು ಮಕ್ಕಳು ಪ್ರಾಥಮಿಕ ಶಾಲೆಗೆ ಹೋಗುತ್ತಾರೆ. ಹತ್ತರಲ್ಲಿ ಒಂದು ಮಗು ಮಾತ್ರ ಪದವಿ ತರಗತಿಯವರೆಗೆ ವ್ಯಾಸಂಗ ಮಾಡುತ್ತದೆ. ಸಮಸ್ಯೆಯ ಅಗಾಧತೆಯನ್ನು ಮನಗಂಡ ಮೇಲೆ ನನಗೆ ಈ ಸಾಮಾಜಿಕ ಕಾರ್ಯದಲ್ಲಿ ತೊಡಗಿಕೊಳ್ಳುವುದಕ್ಕೆ ಪ್ರೇರೇಪಣೆ ಸಿಕ್ಕಿತು. ನೆಲ್ಸನ್ ಮಂಡೇಲಾರವರು ಹೇಳಿದ ಹಾಗೆ, 'ಶಿಕ್ಷಣವು ಅತ್ಯಂತ ಪ್ರಬಲವಾದ ಅಸ್ತ್ರ, ಅದನ್ನು ನೀವು ಜಗತ್ತನ್ನೇ ಬದಲಾಯಿಸಲು ಬಳಸಬಹುದು.'

**ನಾನು ಹೇಗೆ ಆರಂಭಿಸಿದೆ**

ಫಲಾನುಭವಿಗಳನ್ನು ಹುಡುಕುವುದು ನನ್ನ ಮೊದಲ ಕೆಲಸವಾಗಿತ್ತು. ನನ್ನ ಸಂಶೋಧನೆ ಹಾಗು ಪೋಷಕರ ಸಲಹೆಗಳನ್ನು ಆಧರಿಸಿ ಒಂದು ಸರ್ಕಾರಿ ಶಾಲೆಯೊಡನೆ ಕೆಲಸ ಮಾಡುವುದೆಂದು ತೀರ್ಮಾನಿಸಿದೆ. ಬೆಂಗಳೂರಿನ ಕೂಡ್ಲು ಸರ್ಕಾರಿ ಶಾಲೆಯಲ್ಲಿ ಎಲ್ಲ ಸದಸ್ಯರೊಡನೆ ಸಭೆ ನಡೆಸಿದ ಬಳಿಕ, ಆಡಳಿತ ಮಂಡಳಿಯು ಈ ಯೋಜನೆಗೆ ಅನುಮತಿ ನೀಡಿತು.

ಭಾಗೀದಾರರೆಲ್ಲರ ಅಂದರೆ ಪೋಷಕರು, ವಿದ್ಯಾರ್ಥಿಗಳು ಹಾಗು ಶಾಲಾಡಳಿತಗಳ ಹಿತಾಸಕ್ತಿಯನ್ನು ಒಗ್ಗೂಡಿಸಲು ನಾನು ಸುಮಾರು 145 ಸಂದರ್ಶನಗಳನ್ನು ಕೈಗೊಂಡೆ. ಅದರಿಂದ ವಿದ್ಯಾರ್ಥಿಗಳು ಇಂಗ್ಲಿಷ್, ಗಣಿತ ಮತ್ತು ಕ್ರೀಡೆಯಲ್ಲಿ ಆಸಕ್ತಿ ಹೊಂದಿದ್ದಾರೆನ್ನು–ವುದನ್ನು ಕಂಡುಕೊಂಡೆ. ಅವರಲ್ಲಿ ಬಹಳಷ್ಟು ವಿದ್ಯಾರ್ಥಿಗಳು ಸಹ–ಪಠ್ಯ ಚಟುವಟಿಕೆಗಳ ಬಗ್ಗೆಯೂ ಆಸಕ್ತಿ ಹೊಂದಿದ್ದರು. ನನ್ನ ನಂಬಿಕೆಯ ಪ್ರಕಾರ, ಅದು ಬಹುಶಃ ದೂರದರ್ಶನ ಮತ್ತು ಇನ್ನಿತರ ಮಾಧ್ಯಮಗಳಿಗೆ ಅವರು ತೆರೆದುಕೊಂಡಿದ್ದರ ಪರಿಣಾಮವಿರಬೇಕು. ಆದರೆ ಶೈಕ್ಷಣಿಕ ದೃಷ್ಟಿಕೋನದಿಂದ ನೋಡಿದಾಗ, ಇಂಗ್ಲಿಷ್ ಅತ್ಯಂತ ಆಸಕ್ತಿ ಇರುವ ವಿಷಯವೆಂದು ತಿಳಿದುಬಂದಿತು. ಹಾಗಾಗಿ ನಾನು ಐದನೇ ತರಗತಿಯ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಭಾಷೆಯಲ್ಲಿ ಮಾತನಾಡುವುದನ್ನು (Spoken English) ಕಲಿಸಲು ನಿರ್ಧರಿಸಿದೆ (ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷ್‌ಅನ್ನು ಐದನೇ ತರಗತಿಯಲ್ಲಿ ಆರಂಭಿಸಲಾಗುತ್ತದೆ).

ಶಾಲಾಡಳಿತವು ಶಾಲೆಗೆ ಸಂಬಂಧಿಸಿದಂತೆ ಕೆಲವು ಅಭಿವೃದ್ಧಿ ಕಾರ್ಯಗಳನ್ನು ಮಾಡಿಸಿಕೊಳ್ಳಲು ಉತ್ಸುಕವಾಗಿತ್ತು. ಅದಕ್ಕೆ ಹಣಕಾಸಿನ ಅಗತ್ಯವಿತ್ತು. ಹಣಕಾಸಿನ ವ್ಯವಸ್ಥೆಯನ್ನು ಮಾಡಿಕೊಳ್ಳಲು ನನಗೆ ಸ್ವಲ್ಪ ಸಮಯ ಹಿಡಿಯಿತಾದರೂಕೊನೆಯಲ್ಲಿ ಅದು ' ಸಾಧ್ಯವಾಯಿತು. ಪಟ್ಟಿಯು ಈ ಕೆಳಗಿನಂತಿದೆ.

**ಈ ತನಕದ ಪ್ರಗತಿ**

1. ಐದು ಮತ್ತು ಆರನೇ ತರಗತಿಯ 54 ವಿದ್ಯಾರ್ಥಿಗಳ ಒಂದು ಗುಂಪಿಗೆ ಇಂಗ್ಲಿಷ್ ಮಾತನಾಡುವುದನ್ನು ಕಲಿಸಲಾಗುತ್ತಿದೆ.

2. Careach.in ಎಂಬ ಕ್ರೌಡ್–ಫಂಡಿಂಗ್ ವೇದಿಕೆಯೊಂದು (Crowd Funding Platform) ಕಾರ್ಯಾಚರಣೆಯಲ್ಲಿದೆ. ಫೇಸ್‌ಬುಕ್, ಟ್ವಿಟ್ಟರ್ ಮತ್ತು ಇನ್‌ಸ್ಟಾಗ್ರಾಂಗಳಲ್ಲಿಯೂ ಅದರ ಇರುವಿಕೆಯನ್ನು ಕಾಣಬಹುದು. ನಾವು ಈ ಕುರಿತು ಪ್ರಚಾರ ಮಾಡಲು ಮನೆಮನೆಗೆ ಕೂಡ ತಿರುಗಿದೆವು.

3. ಗೋಷ್ಠಿಗಳಿಗೆ ಬೇಕಾದ, ಪರಸ್ಪರ ಸಂವಹನಾತ್ಮಕವಾದ ವಸ್ತುವಿಷಯಗಳನ್ನು ರೂಪಿಸಿದೆವು. ಈ ತನಕ 45 ಗೋಷ್ಠಿಗಳನ್ನು ನಡೆಸಿದ್ದೇವೆ.

4. ನಮಗೆ ಅಗತ್ಯವಿದ್ದ ಹಣಕಾಸಿನ ಸುಮಾರು ಶೇ.50ರಷ್ಟನ್ನು ಈಗಾಗಲೇ ಸಂಗ್ರಹಿಸಿದ್ದು ಅದನ್ನು ಒಂದು ಮುದ್ರಣಯಂತ್ರ, ಸೀಮೆಸುಣ್ಣ ಬಳಸಿ ಬರೆಯಬಹುದಾದ ಹಸಿರು ಹಲಗೆಗಳು ಮತ್ತು ಕೆಲವು ಒಳಾಂಗಣ ಆಟದ ಸಾಮಗ್ರಿಗಳನ್ನು ಖರೀದಿಸಲು ಬಳಸಲಾಗಿದೆ.

ನಾನು ದೃಢವಾದ ಪ್ರಗತಿ ಸಾಧಿಸುತ್ತಿರುವಾಗಲೇ ಕೋವಿಡ್–19 ಬಂದು ತಕ್ಷಣಕ್ಕೆ ಎಲ್ಲವನ್ನೂ ಸ್ತಬ್ಧಗೊಳಿಸಿಬಿಟ್ಟಿತು. ಆನಂತರದಲ್ಲಿ ತಿಳಿದುಬರತೊಡಗಿದ ಹಾಗೆ, ಪೋಷಕರು ಮತ್ತು ಮಕ್ಕಳು ತುಂಬಾ ಕಷ್ಟ ಅನುಭವಿಸುತ್ತಿದ್ದಾರೆ ಎನ್ನುವುದು ಸ್ಪಷ್ಟವಾಯಿತು. ಆದ್ದರಿಂದ ನಾನು ನನ್ನ ಕೆಲಸದ ವಿಧಾನ, ಗತಿ ಎರಡನ್ನೂ ಬದಲಾಯಿಸಿ–ಕೊಂಡು ನನಗೆ ಸಾಧ್ಯವಿರುವ ರೀತಿಯಲ್ಲಿ ವಿದ್ಯಾರ್ಥಿ ಕುಟುಂಬಗಳಿಗೆ ಸಹಾಯ ಒದಗಿಸಲು ತೀರ್ಮಾನಿಸಿದೆ. ಶಾಲಾ ಮುಖ್ಯೋಪಾಧ್ಯಾಯರನ್ನು (ಪ್ರಾಂಶುಪಾಲರು) ಭೇಟಿಯಾಗಿ ಮಾತನಾಡಿದಾಗ, ಅತ್ಯಂತ ಹೆಚ್ಚು ಅಗತ್ಯವಿರುವ 30 ಕುಟುಂಬಗಳಿಗೆ 2020ರ ಆಗಸ್ಟ್‌ನಿಂದ–ಸೆಪ್ಟಂಬರ್‌ವರೆಗೆ ಆಹಾರ ಮತ್ತು ಅವರ ನಿತ್ಯದ ಬದುಕಿಗೆ ಬೇಕಾದ ಸಾಮಗ್ರಿಗಳನ್ನು ನೆರವಿನ ರೂಪದಲ್ಲಿ ನೀಡುವುದು ಅತ್ಯಂತ ಸೂಕ್ತ ಎನ್ನುವುದು ತಿಳಿದುಬಂದಿತು. ಶಾಲಾ ಮುಖ್ಯೋಪಾಧ್ಯಾಯರೊಡನೆ ಸಮಾಲೋಚಿಸಿ, ಫಲಾನುಭವಿಗಳ ಪಟ್ಟಿಯನ್ನು

ತಯಾರಿಸಲಾಯಿತು. ವ್ಯಾಪಕವಾಗಿ ಮನೆಮನೆಗೆ ಭೇಟಿ ನೀಡಿ ಹಾಗು ಆನ್‌ಲೈನ್ ಮೂಲಕವೂ ಹಣವನ್ನು ಕೊಡುಗೆಯಾಗಿ ನೀಡುವಂತೆ ಕೇಳಿಕೊಳ್ಳಲಾಯಿತು. ಹೀಗೆ ಈ ಕುಟುಂಬಗಳಿಗೆ ಸಹಾಯ ಮಾಡಲು ಬೇಕಾದ ಹಣವು ನನಗೆ ಸಾಕಷ್ಟು ಹರಿದುಬರತೊಡಗಿತು.

**ಮುಂದಿರುವ ಕೆಲಸ**


ಯೋಜಿಸಿದ ಚಟುವಟಿಕೆಗಳಾಚೆಗೂ ನೋಡಿದಾಗ ಶಾಲೆಗೆ ಹೆಚ್ಚುವರಿ ಶೌಚಾಲಯ ಸೌಲಭ್ಯ ಅಗತ್ಯವಿರುವುದು ಕಾಣುತ್ತದೆ. ಬೇರೇನು ಸಹಾಯ ಮಾಡಬಹುದು ಎಂಬ ನನ್ನ ಶೋಧನೆ ಮುಂದುವರೆದಿದೆ. ಯಾವುದಾದರೂ ವಾಣಿಜ್ಯ ಸಂಸ್ಥೆ (Corporate) ಅಥವಾ ಸಂಸ್ಥೆಯ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಯಡಿ (Corporate Social Responsibility (CSR)) ನೀಡಲಾಗುವ ಹಣಕಾಸಿನ ಸಂಪನ್ಮೂಲಕ್ಕಾಗಿ ಹುಡುಕುತ್ತಲೇ ಇದ್ದೇನೆ. ಅಂದಾಜು ವೆಚ್ಚವು ಸುಮಾರು ಹತ್ತು  ಲಕ್ಷ ರೂಪಾಯಿಗಳಾಗಿದ್ದು, ಆ ಮೊತ್ತವನ್ನು ಕೊನೆಗೂ ನಾವು ಸಂಗ್ರಹಿಸಬಲ್ಲೆವು ಎಂದು ನನಗೆ ನಿಶ್ಚಿತವಾಗಿ ತಿಳಿದಿದೆ. ಆದರೆ ಸದ್ಯಕ್ಕೆ ಕೇವಲ ಇಂಗ್ಲಿಷ್ ಮಾತನಾಡುವುದನ್ನು ಕಲಿಸುವ ಹಾಗು ಚಿಕ್ಕಪುಟ್ಟ ಮೂಲ ಸೌಕರ್ಯಗಳ ಸುಧಾರಣೆಯ ಕೆಲಸ ಮಾತ್ರ ಮುಂದುವರೆದಿದೆ.


ಇತ್ತೀಚೆಗೆ, ಶಾಲೆಗೆ ಅತಿವೇಗದ ಅಂತರ್‌ಜಾಲ ಸಂಪರ್ಕವನ್ನು (High Speed Internet Connection) ಕಲ್ಪಿಸಿಕೊಡುವಲ್ಲಿ ಕೂಡ ನೆರವಾಗಲು ನನಗೆ ಸಾಧ್ಯವಾಯಿತು.

ಪ್ರಜಾತಾಂತ್ರಿಕ ದೇಶಗಳ ನಾಗರಿಕರಾಗಿ, ಎಲ್ಲರ ಬದುಕೂ ಉತ್ತಮವಾಗುವ ನಿಟ್ಟಿನಲ್ಲಿ ಸಹಾಯಹಸ್ತ ಚಾಚುವುದು ಪ್ರತಿಯೊಬ್ಬರ ಕರ್ತವ್ಯ. ಮಾಡಲು ಸುಲಭವಾದ ಕೆಲಸವನ್ನು ಆರಿಸಿಕೊಳ್ಳುವುದರ ಬದಲಿಗೆ, ನಾವು ನ್ಯಾಯಸಮ್ಮತವಾದ ಕ್ರಮಗಳನ್ನು ಕೈಗೊಳ್ಳಲು ಮುಂದಾಗಬೇಕಿದೆ. ನಾವು ಭೇಷರತ್‌ಸಮಾನತೆಯನ್ನು ತರುವ ದಿಸೆಯಲ್ಲಿ ಕೆಲಸ ಮಾಡಬೇಕು. ಸಂಪತ್ತು, ಲಿಂಗ, ಜಾತಿ, ಧರ್ಮ ಇತ್ಯಾದಿ ಅಸಂಬದ್ಧ ಸಂಗತಿಗಳನ್ನು ಆಧರಿಸಿ ಸಮಾಜವನ್ನು ವರ್ಗೀಕರಿಸಬಾರದು. ಇದು ಕಾರ್ಯಸಾಧ್ಯವಾಗಲು ಸಮಯ ಹಿಡಿಯುತ್ತದೆ ಎನ್ನುವುದು ಸ್ಪಷ್ಟ. ಆದರೆ ನಾವು ಮಾಡಬಹುದಾದ ಕನಿಷ್ಠ ಕಾರ್ಯವೆಂದರೆ, ನಮಗೆ ಸಾಧ್ಯವಾದ ಕ್ರಮಗಳನ್ನು ಕೈಗೊಳ್ಳುವುದು. ನಾನು ನನಗೆ ಸಾಧ್ಯವಿರುವ ಕೆಲಸವನ್ನು ಮಾಡಲು ಪ್ರಯತ್ನಿಸುತ್ತಿದ್ದೇನೆ.



ಒಟ್ಟು 145 ಭಾಗೀದಾರರನ್ನು ಭೇಟಿಯಾದೆ = 124 ವಿದ್ಯಾರ್ಥಿಗಳು + 11 ಶಿಕ್ಷಕರು + 10 ಪೋಷಕರು




## ತರಗತಿ ಕೊಠಡಿಯ ಒಳಗೆ

- ಇಂಗ್ಲಿಷ್ ಪಠ್ಯಪುಸ್ತಕಗಳು ರೂ. 30,000
- ತರಗತಿ ಗ್ರಂಥಾಲಯ ರೂ. 1,20,000
- ಹಸಿರು ಹಲಗೆಗಳು ರೂ. 47,436
- ಬೆಂಚು ಮತ್ತು ಮೇಜುಗಳು ರೂ. 1,54,000

## ಕಾರ್ಯಾಲಯ ಮತ್ತು ಕಟ್ಟಡ

- ಮುದ್ರಣಯಂತ್ರ ರೂ. 1,06,672
- ಕಲಾತ್ಮಕ ಚಿತ್ರಗಳ ನಿರ್ಮಾಣ, ಬಣ್ಣ ಬಳಿಯುವುದು, ರೂ. 1,50,000
- ಒಳಾಂಗಣ ಆಟಗಳು ರೂ. 1,7,000

ನಾವು ಒಂದು ಸರ್ಕಾರಿ ಶಾಲೆಗೆ ನೆರವು ನೀಡುತ್ತಿದ್ದೇವೆ.

↕

ಅಂದಾಜು ವೆಚ್ಚ
ರೂ. 6,17,618 ($ 8,880)
ಶೇ. 10 ಆಕಸ್ಮಿಕ ನಿಧಿ







i https://www.cry.org/resources/pdf/Types_of_Corp_parts_sep11.pdf


**ಪರಾಮರ್ಶನ**

https://www.worldbank.org/en/news/feature/2011/09/20/education-in-india

https://www.ncee.org/wp-content/uploads/2013/10/India-Education-Report.pdf


**ಪ್ರಶಾಂತ್ ಮಿಶ್ರಾ,** ದಿ ಇಂಟರ್‌ನ್ಯಾಷನಲ್ ಸ್ಕೂಲ್ ಬೆಂಗಳೂರಿನಲ್ಲಿ (ಖಿಖಃ) ಹನ್ನೊಂದನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ. ಅರ್ಥಶಾಸ್ತ್ರ ಹಾಗು ಗಣಿತ ಇವರ ಅತ್ಯಂತ ಇಷ್ಟದ ವಿಷಯಗಳು. ತಂತ್ರಜ್ಞಾನದ ಪ್ರಗತಿಯನ್ನು ಅವುಗಳ ಆರ್ಥಿಕ ಪರಿಣಾಮಗಳ ಜೊತೆ ಸಮೀಕರಿಸುವ ವಿಷಯ ಕ್ಷೇತ್ರವನ್ನು ಅನ್ವೇಷಿಸುವುದರಲ್ಲಿ ಬಹಳ ಒಲವಿದೆ. ಪದವಿ ತರಗತಿಯಲ್ಲಿ ಅರ್ಥಶಾಸ್ತ್ರವನ್ನು ಅಭ್ಯಸಿಸಲು ಇಷ್ಟಪಡುತ್ತಾರೆ. ಇವರನ್ನು mprashant@tisb.ac.in ಮೂಲಕ ಸಂಪರ್ಕಿಸಬಹುದು.

ಅನುವಾದ: **ಸಹನಾ ಹೆಗಡೆ** । ಪರಿಶೀಲನೆ: **ಲತಾ ಕೆ.ಸಿ.**